<u>ಅಸಲು ದಾವಾ ಸಂಖ್ಯೆಃ **14 1/2023**</u> **ಪಿ.ಡಬ್ಲೂ -1**

ದಿನಾಂಕಃ 09.06.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯವಿಚಾರಣೆಃ ವಾದಿ ಪರ ಶ್ರೀ ಪಿ ಎಸ್ ವಕೀಲರಿಂದಃ-</u>**

1. ದಿಃ 03.09.2011 ರ ಕ್ರಯ ಪತ್ರದ ಧೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು,

2. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹಿಸ್ಸಾ ಸರ್ವೆ ಅಟ್ಲಾಸ್, ರಿ ಸರ್ವೆ ಪಕ್ಕಾ ಪುಸ್ತಕ ರ ಧೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು ನಿಪಿ-3 ಎಂದು,

3. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹಿಸ್ಸಾ ಸರ್ವೇ ಟಿಪ್ಪಣಿ ಪುಸ್ತಕದ ಧೃಡಿಕೃತನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು,

4. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಆಕಾರಬಂದನ ಧೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು,

5. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಎಂ ಆರ್ ಹೆಚ್ 34/2011-12 ರ ಧೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು,

6. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 2001-02 ರಿಂದ 2004-05 ರವರೆಗಿನ 4 ಆರ್ ಟಿ ಸಿ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-7 ರಿಂದ ನಿಪಿ-10 ಎಂದು,

7. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 2012-13 ರಿಂದ 2021-22 ರವರೆಗಿನ ಆರ್ ಟಿ ಸಿ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-11 ರಿಂದ ನಿಪಿ-19 ಎಂದು,

8. ನನ್ನ ಗಂಡನ ಮರಣ ಪ್ರಮಾಣ ಪತ್ರದ ಧೃಡಿಕೃತ ನಕಲು ಮತ್ತು ನಮ್ಮ ನೋಟರಿಕೃತ ವಂಶ ವೃಕ್ಷ ಹಾಜರುಪಡಿಸಿದ್ದು ಅವುಗಳನ್ನುಕ್ರಮವಾಗಿ ನಿಪಿ-20 ಮತ್ತು ನಿಪಿ-21 ಎಂದು,

9. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 2022-23 ರ ಆರ್ ಟಿ ಸಿ ಹಾಜರುಪಡಿಸಿದ್ದು ಅದನ್ನು ನಿಪಿ-22 ಎಂದು,

10. ದಿಃ 08.02.2023 ರಂದು ನಾನು ಆರಕ್ಷಕ ಮಹಾ ನೀರಿಕ್ಷಕರು ಕೇಂದ್ರ ವಲಯ ಬೆಂಗಳೂರು, ಅಡಿಷನಲ್ ಎಸ್ ಪಿ ಬೆಂಗಳೂರು ಜಿಲ್ಲೆ ಮತ್ತು ಪೊಲೀಸ ಅಧೀಕ್ಷಕರು ಬೆಂಗಳೂರು ಜಿಲ್ಲೆ ಇವರಿಗೆ ನೀಡಿದ್ದ ದೂರಿನ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-23 ರಿಂದ ನಿಪಿ-25 ಎಂದು, ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರಿದ್ದರಿಂದ ಮುಂದುಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇದೆ**

**ಪ್ರಧಾನ** ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.